ಇ) ಈ ಯೋಜನೆಯನ್ನು ಪಟ್ಟಣದ ಈಗಿನ ಜನಸಂಖ್ಯೆಗೆ 2 5 ದಶಲಕ್ಷ ಲೀಟರ್‌ಗಳಿಗೆ ವಿನ್ಯಾಸ ಮಾಡಲಾಗಿದ್ದು, ಈಗ ದಿನಂಪ್ರತಿ 2 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ ಏರು ಕೊಳವೆ ಮಾರ್ಗದಲ್ಲಿ ಆಗಾಗ್ಗೆ ಒಡೆಯುತ್ತಿದ್ದು Air Valve ಅಳವಡಿಸಿ ಕೊಳವೆ ಮಾರ್ಗದ ಒಡೆಯುವುದನ್ನು ನಿಲ್ಲಿಸಿ ಪೂರ್ಣಪ್ರಮಾಣದ ನೀರು ಪೂರೈಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗಿರುವ ರಸ್ತೆ ಅಭಿವೃದ್ಧಿ ಯೋಜನೆಯ ಬಗ್ಗೆ

21 (188) ಶ್ರೀ ಹೆಚ್ ಎಂ ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗಿರುವ 100 ಅಡಿ ರಸ್ತೆ ಯೋಜನೆ ಅಭಿವೃದ್ಧಿ ಪೂರ್ಣಗೊಳ್ಳದೇ ಇರಲು ಕಾರಣಗಳೇನು ಈವರೆಗೆ ಈ ಯೋಜನೆಗೆ ಖರ್ಚು ಮಾಡಲಾಗಿರುವ ಹಣವೆಷ್ಟು ಹಾಲಿ ಎಷ್ಟು ಕಿ ಮೀ ರಸ್ತೆಗೆ ಡಾಂಬರೀಕರಣ ಹಾಗೂ ಮೆಟಲಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆಯೆ ಇದಕ್ಕೆ ತಗಲಿರುವ ಹಣವೆಷ್ಟು (ವಿವರ ನೀಡುವಿರಾ)

ಆ) ಈ 100 ಅಡಿ ವರ್ತುಲ ರಸ್ತೆಯ ಮಾರ್ಗ ಬದಲಾವಣೆ ಪ್ರಸ್ತಾವನೆ ಪ್ರಾಧಿಕರದ ಮುಂದೆ ಇದೆಯೆ

ಇ) ಪ್ರಾಧಿಕಾರದ 100 ಅಡಿ ರಸ್ತೆ ಯೋಜನೆ ಬಗ್ಗೆ ಮನೆ ಕಳೆದುಕೊಂಡ ನ್ಯಾಮಂಡ್ಲಿ ಹಾಗೂ ಅಮೀರ್ ಅಹಮದ್ ಕಾಲೋನಿ ಸಂತ್ರಸ್ಥರಿಗೆ ಪರಿಹಾರ ರೂಪವಾಗಿ ನೀಡಿರುವ ನಿವೇಶನಗಳಿಗೆ ಹಕ್ಕು ಪತ್ರ ಸ್ವಾಧೀನ ಪತ್ರ ನೀಡಲು ವಿಳಂಬವಾಗಿರುವುದಕ್ಕೆ ಕಾರಣಗಳೇನು ಯಾವಾಗ ಮೇಲ್ಕಂಡ ಸಂತ್ರಸ್ಥರಿಗೆ ಹಕ್ಕು ಪತ್ರ ಸ್ವಾದೀನ ಪತ್ರ ನೀಡಲಾಗುವುದು ತಿಳಿಸುವಿರಾ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 16 ಕಿ ಮೀ ಉದ್ದದ 100 ಅಡಿ ವರ್ತುಲ ರಸ್ತೆಯನ್ನು ನಿರ್ಮಾಣ ಮಾಡಿದ್ದು ಅದರಲ್ಲಿ 12 80 ಕಿ ಮೀ ನಷ್ಟು ಉದ್ದದ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ ಉಳಿದ 5 15 ಕಿ ಮೀ ಉದ್ದದ ರಸ್ತೆಯ ಕಾಮಗಾರಿಯು ಬಾಕಿ ಇರುತ್ತದೆ ಈ ಪೈಕಿ ಶಂಕರ ಮರದಿಂದ ರೈಲ್ವೆ ಕಾಲೋನಿಯವರೆಗಿನ 2 75 ಕಿ ಮೀ ರಸ್ತೆಯ ಪೈಕಿ 0 75 ಕಿ ಮೀ ರೈಲ್ವೆ ಇಲಾಖೆಗೆ ಸೇರಿದ್ದು ಇದನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸದೇ ಇರುವುದರಿಂದ ಅಭಿವೃದ್ಧಿಪಡಿಸಿರುವುದಿಲ್ಲ ಇದುವರೆಗೆ ಒಟ್ಟು 295 14 ಲಕ್ಷ ರೂ ಗಳನ್ನು ಖರ್ಚು ಮಾಡಲಾಗಿದೆ

ಆ) ಹೌದು

ಇ) ಪ್ರಾಧಿಕಾರದ 100 ಅಡಿ ರಸ್ತೆ ಯೋಜನೆ ಬಗ್ಗೆ ಮನೆ ಕಳೆದುಕೊಂಡ ಸಂತ್ರಸ್ಥರಿಗೆ (ನ್ಯಾಮಂಡ್ಲಿ ಹಾಗೂ ಅಮೀರ್ ಅಹಮದ್ ಕಾಲೋನಿ) ಪರಿಹಾರ ರೂಪವಾಗಿ ನೀಡಿರುವ ನಿವೇಶನಗಳಿಗೆ ಹಂಚಿಕೆ ಪತ್ರವನ್ನು ನೀಡಲಾಗಿದೆ ನಿವೇಶನದ ಬೆಲೆಯನ್ನು ಪಾವತಿಸದ ಹೊರತು ಸ್ವಾಧೀನ ಪತ್ರ ನೀಡಲು ಅವಕಾಶವಿಲ್ಲ ಪ್ರಾಧಿಕಾರದ ನಿಯಮಾವಳಿ ಅನ್ವಯ ಉಚಿತವಾಗಿ ನಿವೇಶನ ನೀಡಲು ಅವಕಾಶವಿಲ್ಲದ ಕಾರಣ, ಫಲಾನುಭವಿಗಳಿಗ ಆಶ್ರಯ ಯೋಜನೆ ಅಡಿ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ